## ನಿಯಮ – 72 ರಡಿಯಲ್ಲಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ದಿನಾಂಕ: 19.02.2024 ರಂದು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**ಪ್ರಶ್ನೆ:**

ನಮ್ಮ ರಾಜ್ಯದ ಅಂತರಾಷ್ಟ್ರೀಯ ಕರಕುಶಲ ಕಲೆಗಳಲ್ಲಿ ಒಂದಾದ ಕಿನ್ನಾಳ ಗೊಂಬೆ ತಯಾರಿಕೆಯೂ ಒಂದಾಗಿ ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮದಲ್ಲಿ ಬೊಂಬೆ ತಯಾರಿಕೆಯಲ್ಲಿ ತೊಡಗಿಕೊಂಡಿರುವ ಅನೇಕ ವಂಶಪರಂಪರೆ ಕುಟುಂಬಗಳಿವೆ. ಇವರು ಗೊಂಬೆ ತಯಾರಿಕೆ ಒಂದನ್ನೇ ಮೆಚ್ಚಿಕೊಂಡು ಬದುಕನ್ನು ಸಾಗಿಸುತ್ತಿದ್ದಾರೆ. ಇಲ್ಲಿ ಸುಮಾರು ನೂರಾರು ಕುಟುಂಬಗಳಿವೆ. ಅದರಲ್ಲಿ ಕೆಲವು ಕುಟುಂಬಗಳು ರಾಜ್ಯ ಪ್ರಶಸ್ತಿಯನ್ನು ಪಡೆದಿವೆ. ಇವರ ಆರ್ಥಿಕ ಬದುಕು ಇವತ್ತಿನ ದುಬಾರಿ ಜೀವನಕ್ಕೆ ಹೋಲಿಸಿದರೆ ಇವರ ಗೊಂಬೆ ತಯಾರಿಕೆಯಿಂದ ಬರುವ ಆದಾಯವು ಕೇವಲ ವಾರ ಬದುಕನ್ನು ಸಾಗಿಸುವಷ್ಟು ಆದಾಯ ಬರುತ್ತಿದೆ. ಆದ್ದರಿಂದ ಕಳೆದ 25 ವರ್ಷಗಳ ಹಿಂದೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವನ್ನು ಕಾವೇರಿ ಎಂಪೋರಿಯಂ ಸ್ಥಾಪಿಸಿ ಅವರ ಮೂಲಕ ಇಲ್ಲಿಯ ಕುಶಲಕರ್ಮಿಗಳು ತಯಾರಿಸುವ ಬೊಂಬೆಗಳನ್ನು ಮಾಸಿಕವಾಗಿ ಸದರಿ ನಿಗಮವು 20-25 ಸಾವಿರ ರೂವರೆಗೆ ಗೊಂಬೆಗಳನ್ನು ಖರೀದಿ ಮಾಡುತ್ತಿದೆ. ಆರ್ಥಿಕ ಮೊತ್ತವೆ ಅಲ್ಲಿನ ಕುಶಲಕರ್ಮಿಗಳ ಬದುಕಿಗೆ ಆಧಾರ ಸ್ತಂಭದಂತೆ ಭದ್ರ ಬುನಾದಿ ಆಗಿತ್ತು. ಅಲ್ಲದೆ ಸದರಿ ನಿಗಮದಿಂದ ಕುರಕುಶಲಕರ್ಮಿಗಳಿಗೆ ವಸತಿ ಯೋಜನೆಯ ಮೂಲಕ ಮನೆಗಳನ್ನು ಮಂಜೂರು ಮಾಡಿತ್ತು. ಆದರೆ ಇಲ್ಲಿಯವರೆಗೆ ಇನ್ನು 50 ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ನೀಡಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಸದರಿ ನಿಗಮವನ್ನು ಮರು ಸ್ಥಾಪಿಸಿ ಅದರ ಮೂಲಕ ಮಾಸಿಕವಾಗಿ ಗೊಂಬೆಗಳನ್ನು ಖರೀದಿಸಿ ಕರಕುಶಲ ಕುಟುಂಬಗಳಿಗೆ ಆರ್ಥಿಕ ಶಕ್ತಿಯನ್ನು ತುಂಬಬೇಕೆಂದು ಮತ್ತು ಕರಕುಶಲ ಕರ್ಮಿಗಳಿಗೆ ಮನೆಯ ಹಕ್ಕು ಪತ್ರಗಳನ್ನು ನೀಡಬೇಕೆಂದು ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಉತ್ತರ:**

ಕಿನ್ನಾಳದ ಗೊಂಬೆಗಳ ಕರಕುಶಲಕಲೆಯು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಪ್ರಖ್ಯಾತಿಯನ್ನು ಗಳಿಸಿತ್ತೆಂದು ಇತಿಹಾಸಕಾರರಿಂದ ವಿಶ್ಲೇಷಿಸಲ್ಪಟ್ಟಿದೆ. "ಚಿತ್ರಗಾರ್"ಎಂದು ಕರೆಯಲ್ಪಡುವ ಸಮುದಾಯವು ಈ ಕಲೆಯಲ್ಲಿ ನಿರತರಾಗಿದ್ದು, ವಿಜಯನಗರ ಸಾಮ್ರಾಜ್ಯದ ಅವನತಿಯ ತರುವಾಯ ಈ ಚಿತ್ರಗಾರ್ ಸಮುದಾಯವು ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮಕ್ಕೆ ವಲಸೆ ಬಂದು ನಿಂತು ಈ ಕಲೆಯನ್ನು ಮುಂದುವರಿಸಿದ್ದರಿಂದ ಈ ಕಲೆಗೆ ಗ್ರಾಮದ ಹೆಸರಾದ "ಕಿನ್ನಾಳ "ಮುನ್ನೆಲೆಗೆ ಬಂದಿದೆ.

ಕಿನ್ನಾಳದ ಗೊಂಬೆಗಳನ್ನು ತಯಾರಿಸಲು ಸಾಮಾನ್ಯವಾಗಿ ಸ್ಥಳೀಯವಾಗಿ ಲಭ್ಯವಿರುವ ಮತ್ತು ಉಪಯೋಗಕ್ಕೆ ಬಾರದ ನುಗ್ಗೇಮರ, ಹಾಲೇಮರ, ಮಾವಿನ ಮರ, ಹೀಗೆ ಹಗುರವಾದ ಮರವನ್ನು ಮೂಲ ವಿಗ್ರಹದ ಕೆತ್ತನೆಗೆ ಬಳಸಲಾಗುತ್ತದೆ ಹುಣಿಸೇ ಬೀಜದ ಪುಡಿ, ಬೆಣಚು ಕಲ್ಲಿನ ಪುಡಿ ಮುಂತಾದವುಗಳಿಂದ ದ್ರವರೂಪದ ಅಂಟಿನಂತಹ ಪೇಸ್ಟನ್ನು ತಯಾರಿಸಿ, ಮರದ ವಿವಿಧ ಘಟಕಗಳನ್ನು ಜೋಡಿಸಿ ಅಲಂಕಾರಗಳನ್ನು ಈ ಪೇಸ್ಟಿನಿಂದ ಅಂಟಿಸಲಾಗುತ್ತದೆ. ತರುವಾಯ ನೈಸರ್ಗಿಕವಾದ ಹಸಿರು, ಹಳದಿ, ಕೆಂಪು, ನೀಲಿ, ಕಪ್ಪು ಮುಂತಾದ ಬಣ್ಣಗಳಿಂದ ಲೇಪನ ಮಾಡಿ ವಿಗ್ರಹಗಳು ಮತ್ತು ಆಟಿಕೆಗಳನ್ನು ತಯಾರಿಸಲಾಗುತ್ತದೆ. ದೇವರ ಮರದ ವಿಗ್ರಹಗಳು, ಪೂಜಾ ಪೀಠಗಳು, ಮಣೆಗಳು, ತೊಟ್ಟಿಲುಗಳು, ರಾಜರು ಮತ್ತು ಸೈನಿಕರು, ಕುದುರೆ, ಸಿಂಹ, ವಿವಿಧ ಕಸುಬುಗಳಲ್ಲಿ ನಿರತರಾದವರ ಮಾದರಿಗಳು, ಆಟದ ಸಾಮಾನುಗಳು, ಹಣ್ಣು, ತರಕಾರಿಗಳ ಮಾದರಿಗಳನ್ನು ಮರದಿಂದ ತಯಾರಿಸಿ ಅವುಗಳಿಗೆ ಆಕರ್ಷಕ ಬಣ್ಣಗಳಿಂದ ಅಲಂಕರಿಸಲಾಗುತ್ತದೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯದ ಪಾರಂಪರಿಕ ಕರಕುಶಲ ಕಲೆಗಳನ್ನು ಉಳಿಸಿ, ಬೆಳೆಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯದ ಪಾರಂಪರಿಕ ಪ್ರಮುಖ ಕಲೆಗಳಲ್ಲಿ ನಿರತರಾಗಿರುವ ಕರಕುಶಲ ಕರ್ಮಿಗಳನ್ನು ಗುರುತಿಸಿ ಅವರ ಸಾಂದ್ರತೆ ಹೆಚ್ಚಾಗಿರುವ ಕಡೆಗಳಲ್ಲಿ ಪ್ರಸ್ತುತ 13 ಕಲಾ ಸಂಕೀರ್ಣಗಳು ಅಸ್ತಿತ್ವದಲ್ಲಿವೆ.

- ಇತರೆ ಕಲೆಗಳಂತೆಯೇ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಿನ್ನಾಳ ಕಲೆ ಮತ್ತು ಕಿನ್ನಾಳದ ಗೊಂಬೆಗಳು ಮತ್ತು ಆಟಿಕೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲು, ಕಿನ್ನಾಳದಲ್ಲಿ ಒಂದು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ, ಅದರ ಮೂಲಕ ಕುಶಲಕರ್ಮಿಗಳಿಗೆ ತರಬೇತಿ ನೀಡುವುದು, ಅವರು ಉತ್ಪಾದಿಸುವ ವಸ್ತುಗಳನ್ನು ನೇರವಾಗಿ ಖರೀದಿಸಿ ತನ್ನ ಹೆಸರಾಂತ "ಕಾವೇರಿ" ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡುವ ಮೂಲಕ ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದೆ.

- ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು 2012ರಲ್ಲಿ ಕಿನ್ನಾಳದ ಕಲೆಗೆ 165ನೇ ಸಂಖ್ಯೆಯ ಭೌಗೋಳಿಕ ಸೂಚನಾ ಸ್ಥಾನ ದೊರಕಿಸಿಕೊಟ್ಟಿತು. ಈ ಪರಿಣಾಮವಾಗಿ ಕಿನ್ನಾಳ ಗೊಂಬೆಗಳ ತಯಾರಿಕೆಯು ಉತ್ತುಂಗಕ್ಕೇರಿತು. 2013ನೇ ಸಾಲಿನ ಗಣರಾಜ್ಯೋತ್ಸವದಲ್ಲಿ ಕಿನ್ನಾಳದ ಗೊಂಬೆಗಳ ಸ್ತಬ್ಧಚಿತ್ರ ದೆಹಲಿಯಲ್ಲಿ ಪ್ರದರ್ಶನಗೊಂಡು ಈ ಕಲೆಯು ದೇಶೀಯವಾಗಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಯನ್ನು ಪಡೆಯಿತು.

- ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು 2007 ರಲ್ಲಿ ಐರೋಪ್ಯ ರಾಷ್ಟ್ರ ಸ್ಕಾಟ್ಲೆಂಡ್‌ನ ಗ್ಲ್ಯಾಸ್ಗೋ ವಿಶ್ವವಿದ್ಯಾನಿಲಯ ಮತ್ತು ಗ್ಲ್ಯಾಸ್ಗೋ ಸ್ಕೂಲ್ ಆಫ್ ಆರ್ಟ್‌ನ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಕಿನ್ನಾಳದ ಗೊಂಬೆಗಳ ಕಲೆಯನ್ನು ಪುನರುಜ್ಜೀವನಗೊಳಿಸಲು ಯೋಜನೆಯನ್ನು ರೂಪಿಸಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಕಿನ್ನಾಳದ ಕರಕುಶಲಕರ್ಮಿಗಳು, ಯುವಕರಲ್ಲದೇ ಸ್ಕಾಟ್ಲೆಂಡ್‌ನ ಹತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಕಿನ್ನಾಳದ ಕಲೆಯಲ್ಲಿ ತರಬೇತಿ ಪಡೆದರು. ಈ ಮೂಲಕ ಹಲವು ಯುವಕರಿಗೆ ಕಿನ್ನಾಳದ ಕಲೆಯಲ್ಲಿ ಆಸಕ್ತಿ ಮೂಡಿಸುವಲ್ಲಿ ಹಾಗೂ ವಿದೇಶಗಳಲ್ಲೂ ಪ್ರಚಾರಗೊಳಿಸಿ ಈ ಕಲೆಯನ್ನು ಜೀವಂತವಾಗಿ ಉಳಿಸುವಲ್ಲಿ ನಿಗಮವು ಸಫಲವಾಗಿದೆ.

- ಕಿನ್ನಾಳ ಕಲೆಯನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಮತ್ತು ಹೆಚ್ಚು ಯುವಜನರನ್ನು ಆಕರ್ಷಿಸುವ ದಿಸೆಯಿಂದ ಪ್ರಸ್ತುತ ನಿಗಮದ ವತಿಯಿಂದ ಕಿನ್ನಾಳ ಕಲೆಯಲ್ಲಿ ಪ್ರಚಲಿತ ವಿದ್ಯಮಾನಕ್ಕೆ ತಕ್ಕಂತೆ ಹೊಸ ವಿನ್ಯಾಸಗಳ ತಯಾರಿ ಮತ್ತು ಸುಧಾರಿತ ಉಪಕರಣಗಳ ಬಳಕೆಯ ಬಗ್ಗೆ ಉಚಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 30 ಜನ ಕರಕುಶಲಕರ್ಮಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯುತ್ತಿದ್ದಾರೆ.

- ಕರಕುಶಲಕರ್ಮಿಗಳು ಯಾವುದೇ ಕುಂದು ಕೊರತೆಯಿಲ್ಲದೇ ತಮ್ಮ ಕಸುಬನ್ನು ಮುಂದುವರಿಸಿಕೊಂಡು ಹೋಗಲು ಕಿನ್ನಾಳದಲ್ಲೇ ವಿಶ್ವ-1 ಯೋಜನೆಯಡಿ 1995-96ನೇ ಸಾಲಿನಲ್ಲಿ 30 ಹಾಗೂ ವಿಶ್ವ-2 ಯೋಜನೆಯಡಿ 2004-05ನೇ ಸಾಲಿನಲ್ಲಿ 30 ವಸತಿ-ಕಾರ್ಯಾಗಾರವನ್ನು ನಿರ್ಮಿಸಿ ಕೊಟ್ಟಿರುತ್ತದೆ ಮತ್ತು ಇತರೆ ಕಲೆಯಲ್ಲಿ ನಿರತರಾಗಿರುವ ಕುಶಲಕರ್ಮಿಗಳಿಗೆ ಸೌಲಭ್ಯಗಳನ್ನು ಒದಗಿಸಿದಂತೆ ಈ ಕುಶಲಕರ್ಮಿಗಳ ನೆಲೆಗೂ ರಸ್ತೆ, ವಿದ್ಯುತ್ ಸಂಪರ್ಕ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಮುಂತಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಇವರು ಉತ್ಪಾದಿಸುವ ವಸ್ತುಗಳನ್ನು ನೇರ ಹಣ ಪಾವತಿ ಮಾಡುವ ಮೂಲಕ ಸಂಗ್ರಹಿಸುತ್ತಾ ಬಂದಿದೆ.

ವಿಶ್ವ-1 ಮತ್ತು ವಿಶ್ವ-2 ಯೋಜನೆಯಡಿ ರಾಜ್ಯದ ವಿವಿಧ ಕರಕುಶಲಕರ್ಮಿಗಳಿಗೆ ಹಂಚಿಕೆ ಮಾಡಲಾಗಿದ್ದ ವಸತಿ ಮತ್ತು ಕಾರ್ಯಾಗಾರದ 22 ವರ್ಷಗಳ ಗುತ್ತಿಗೆ ಅವಧಿಯು ಮುಕ್ತಾಯವಾಗಿರುವುದರಿಂದ, ವಿವಿಧ ಕುಶಲಕರ್ಮಿಗಳು ಒಳಗೊಂಡಂತೆ ಕಿನ್ನಾಳ ಕುಶಲಕರ್ಮಿಗಳಿಗೆ ಒಟ್ಟು 60 ವಸತಿ ಮತ್ತು ಕಾರ್ಯಾಗಾರ ಹಂಚಿಕೆಯಾಗಿದ್ದು, ಈ ಎಲ್ಲಾ ಕುಶಲಕರ್ಮಿಗಳಿಗೆ ಹಕ್ಕುಪತ್ರ ವರ್ಗಾಯಿಸಲು ಸರ್ಕಾರದ ಮಟ್ಟದಲ್ಲಿ ದಿ:

05.01.2024 ರಂದು ನಡೆದ ಸಭೆಯಲ್ಲಿ ಚರ್ಚಿಸಿ, ವಸ್ತುಸ್ಥಿತಿ ಆಧರಿಸಿ ಕೆಲವು ಮಾಹಿತಿಗಳನ್ನು Format / Checklist ತಯಾರಿಸಿ, ಅದರಂತೆ, ಮನೆಮನೆ ಸರ್ವೆ ಕಾರ್ಯಕೈಗೊಂಡು, ಫೋಟೋ ಸಮೇತ ಸೂಕ್ತ ದಾಖಲೆಗಳೊಂದಿಗೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಸದರಿ ಮಾಹಿತಿ ಪಡೆದು ನಂತರ ವಿಶ್ವ-1 ಮತ್ತು ವಿಶ್ವ-2 ಯೋಜನೆಯಡಿ ಕಿನ್ನಾಳ ಕುಶಲಕರ್ಮಿಗಳು ಒಳಗೊಂಡಂತೆ ಈ ಯೋಜನೆಯಡಿಯಲ್ಲಿ ಅರ್ಹ ಕುಶಲಕರ್ಮಿಗಳಿಗೆ ವಸತಿ ಮತ್ತು ಕಾರ್ಯಾಗಾರದ ಹಕ್ಕುಪತ್ರಗಳನ್ನು ವಿತರಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆಗಳ ಸಚಿವರು

ಸಿಐ 70 ಸಿಎಸ್ ಸಿ 2024